ಸುಧೀರ ನೀರು ಕುಡಿದಿಟ್ಟು "ಎಲ್ಲಾ ಹಾಗೇ ಕಣೋ. ಇದೊಂದೇ ಹೇಳಬೇಡ. ಏನೋ ಕೊಂಚ ಅನುಕೂಲವಾಗಿದೆ. ಹಿಂದೆ ಅಪ್ಪಯ್ಯನೂ ಬೆನ್ನಿಗಿದ್ದಾರೆ. ಒಂದು ಮನೆ ಅಂತ ಈಗ್ಲೇ ಕಟ್ಟಿಸಿಬಿಡುವಾ ಅನ್ಕೊಂಡೆ. ಅಪ್ಪನೂ ಹಳ್ಳಿಯಿಂದ ಒಂದು ಲಕ್ಷ ರೂ. ತಂದು ಕಾಂಟ್ರಾಕ್ಟರ್‌ಗೆ ಕೊಟ್ಟು ಶುರು ಮಾಡಿಸಿದರು, ಪ್ಲಾನು ಸ್ಯಾಂಕ್ಷನ್ ಮಾಡಿಸ್ಕೊಂಡು ಗುದ್ದಲಿ ಪೂಜೆ ಮಾಡಿದ್ದೇ ತಲೆನೋವು ಶುರುವಾಯಿತು. ಇವಳೂ 'ನಾಳೆ ಮಕ್ಕಳು ದೊಡ್ಡವ್ರಾಗ್ತಾರೆ. ಅವರಿಗೊಂದೊಂದು ರೂಮು ಬೇಡ್ವಾ? ನಿಮ್ಮ ತಂದೆ ತಾಯಿ, ನಮ್ಮ ತಂದೆ ತಾಯಿ, ಗೆಸ್ಟ್‌ಗಳು ಬಂದರೆ ಬೇರೆ ಕೋಣೆ ಬೇಕಾಗುತ್ತೆ' ಅಂತ ಹೇಳಿದ್ದೇ ಬೆಳೀತ ಹೋಯ್ತು. 'ಶೇಖರನ ಮನೇಲಿ ಗ್ರಾನೈಟ್ ಹಾಕ್ಸಿದಾರೆ ಕಣೋ. ಎಷ್ಟು ಚೆನ್ನಾಗಿ ಹೊಳೆಯುತ್ತೆ ಅಂತೀಯಾ? ಅದನ್ನೇ ಹಾಕ್ಸು' ಎನ್ನುವ ಅಮ್ಮ, 'ಬಾಥ್ ರೂಮು ಎಕ್ಸೆಸರೀಸ್ ಎಲ್ಲ ಸುಮತಿಯ ಮನೇಲಿ ಸಕತ್ತಾಗಿದೆ. ಹಾಗೇ ಮಾಡ್ಸು' ಎನ್ನುವ ತಂಗಿ, 'ನಮ್ಮ ಸುಭಾಷನ ಮನೇಲಿ ಮೊಡ್ಯುಲರ್ ಕಿಚನ್ ಮಾಡಿದಾನಲ್ಲಾ, ಏನ್ ಸೂಪರ್ ಆಗಿದೆ ಗೊತ್ತಾ? ಇಟಾಲಿಯನ್ ಮಾದರಿ. ಹಾಗೇ ಮಾಡ್ಸಿ' ಅಂದ್ಲು ನಾದಿನಿ. ಎಂಜಿನಿಯರ್ ಎಲ್ಲ ಸೇರಿ ಬಜೆಟ್ ಹೇಳಿದಾಗ ಭೂಮಿಗಿಳಿದು ಹೋಗಿದ್ದೆ. ನಮ್ಮ ಅಂದಾಜಿನ ಮೂರು ಪಟ್ಟು. ಎಲ್ಲಿಂದ ತರೋಣ? ಅಪ್ಪನಂತೂ 'ನಮ್ಮ ಜಮೀನು ಮನೆಯೆಲ್ಲ ಮಾರಿದ್ರೂ ಇಷ್ಟಾಗಲ್ಲ. ಯೋಚ್ನೆ ಮಾಡು' ಅಂದ್ರು. ಮತ್ತೆ ಕಡಿತಗಳು ಶುರುವಾಯಿತು. ಸಾಮಾನ್ಯವಾದ ಎರಡು ಬೆಡ್ರೂಮಿನ ಮನೆಯೊಂದನ್ನು ಕಟ್ಟಿಕೊಂಡು ಉಸಿರು ಬಿಟ್ಟೆ. ಹೆಂಡ್ತಿ ನಾಲ್ಕು ದಿನ ದುಸುಮುಸು ಮಾಡಿ ತೆಪ್ಪಗಾದಳು. ನನಗೆ ನಮ್ಮ ಮನೆಯೆಂಬ ಅಭಿಮಾನ. ಅವಳಿಗೆ ಬಾಡಿಗೆ ಕಟ್ಟಬೇಕಾಗಿಲ್ಲವೆಂದು ಸಮಾಧಾನ. ಇದು ನಮ್ಮ ನೆಲದ ಅಂಚಿನ ಕತೆ" ಎಂದು ನಸುನಕ್ಕ.

ತಟ್ಟೆಯಲ್ಲಿದ್ದ ಉಪ್ಪಿಟ್ಟನ್ನು ಬಾಯಿಗಿಡುತ್ತಾ "ಎಲ್ಲರದ್ದೂ ಇದೇ ಕತೇಪ್ಪಾ. ನಮ್ಮಣ್ಣ ಒಳ್ಳೆ ಅನುಕೂಲಸ್ಥ. ಬೆಂಗಳೂರಲ್ಲಿ ಮನೆ ಇದೆ. ಸೈಟ್‌ಗಳಿವೆ. ಮಗನೂ ಜಾಣ. ಮೆಡಿಕಲ್ ಓದ್ತೀನಿ ಅಂದ. ಮೆರಿಟ್‌ನಲ್ಲೇ ಸೀಟು ಸಿಕ್ತು. ನಮಗೆಲ್ಲರಿಗೂ ಎಷ್ಟು ಖುಷಿಯಾಗಿತ್ತು ಗೊತ್ತಾ? ಸ್ವರ್ಗಕ್ಕೆ ಮೂರೇ ಗೇಣು ಉಳಿದಿತ್ತು. ಮುಂದೇನೆ ತೊಂದರೆ ಬಂದಿದ್ದು ನೋಡು. ಪೋಸ್ಟ್ ಗ್ರಾಜುಯೇಷನ್ ಮಾಡಿಸ್ದೆ ಇದ್ರೆ ಬೆಲೆ ಇಲ್ಲ. ಅದಕ್ಕೋ ಕೋಟಿ ರೂಪಾಯಿಗಳ ಮೇಲೆನೇ ಲೆಕ್ಕ. ಕೊಟ್ಟಿದ್ದಾಯ್ತು. ಎರಡೂ ಸೈಟ್‌ಗಳೂ ಹೋದವು. ಆಸ್ಪತ್ರೆ ಬಿಡು, ಈಗ ಒಳ್ಳೆ ಕ್ಲಿನಿಕ್ ಶುರು ಮಾಡ್ಬೇಕೂಂದ್ರೂ ದೊಡ್ಡ ಖರ್ಚೇ. ಜೊತೆಗೆ ಪ್ರಾಕ್ಟೀಸು ಸೆಟಲ್ ಆಗುವವರೆಗೆ ಆದಾಯವನ್ನೂ ನಿರೀಕ್ಷಿಸುವಂತಿಲ್ಲ. ಬೇರೆ ಬೇರೆ ಆಸ್ಪತ್ರೆ ಸುತ್ತುತ್ತ ಕೆಲಸ ಮಾಡಲು ಅವನಿಗಿಷ್ಟವಿಲ್ಲವಂತೆ. ತಲೆ ಮೇಲೆ ಕೈ ಹೊತ್ತು ನೆಲದ ಮೇಲೆ ಕುಳಿತಿದ್ದಾನೆ ನಮ್ಮಣ್ಣ" ಎಂದ ದಿಲೀಪ.

ದಾಕ್ಷಾಯಿಣಿ ಒಳಗೇ ದುಮುಗುಟ್ಟುತ್ತಿದ್ದಳು. ಕರೆದದ್ದೇ ಬೇರೆ ವಿಷಯಕ್ಕೆ. ಇಲ್ಲಿ ನಡೀತಾ ಇರೋದೇ ಬೇರೆ. ಉಪ್ಪಿಟ್ಟಿನ ತಟ್ಟೆ ಹಿಡಿದು ಬಡಿಸುತ್ತಾ ವಿಷಯಾಂತರ ಮಾಡಿದಳು. "ಸುರೇಶ, ನೀವು ಬಿಡಿ. ಬೇಕಾದಷ್ಟಿದೆ. ಇವೆಲ್ಲ ತೊಂದರೇನೇ ಇಲ್ಲ" ಎಂದಳು. ಸ್ವಲ್ಪ ಉಪ್ಪಿಟ್ಟು ಬಡಿಸಿಕೊಂಡು "ಅತ್ತಿಗೆ, ನಿಮಗ್ಗೊತ್ತಿಲ್ಲ. ನಮ್ಮದೂ ಇದೇ ನೆಲ, ಇದೇ ಅಂಚು. 'ಆನೆಗೆ ಆನೆ ಭಾರ. ಇಲಿಗೆ ಇಲಿ ಭಾರ' ಅಂತಾರಲ್ಲ, ಹಾಗದು. ಮಗ ಎಂಜಿನಿಯರಿಂಗ್ ಮುಗಿಸ್ದ. 'ಎಮ್.ಎಸ್. ಮಾಡಕ್ಕೆ ಅಮೆರಿಕಕ್ಕೆ ಹೋಗ್ತೀನಿ' ಅಂದ. ತಕ್ಷಣ 'ಯಸ್' ಅಂದೆ. ಮುಂದೆ ಶುರುವಾಯ್ತು ನೋಡು ಗೋಳು, ಒಂದೊಂದು ವಿಶ್ವವಿದ್ಯಾಲಯಕ್ಕೂ ಬೇರೆ ಬೇರೆ ಫೀಸುಗಳು. ಉತ್ತಮವಾದದ್ದೆಲ್ಲ ಎರಡು ವರ್ಷಕ್ಕೆ ಐವತ್ತರಿಂದ ಅರವತ್ತು ಲಕ್ಷದವರೆಗೆ ಬರೀ ಕಾಲೇಜು ಫೀಸು. ಇನ್ನು ಅವನ ಜೀವನಕ್ಕೆ... 'ಲೋನ್ ಮಾಡಿ, ಆಮೇಲೆ ನಾನೆಲ್ಲ ತೀರಿಸ್ತೀನಿ' ಅಂತಾನೆ.